ಕೂಡ ಒಂದು ಅಪರೂಪದ ಸಾಧನೆಯೆಂದು ನಾನು ಈ ಸಂದರ್ಭದಲ್ಲಿ ಭಾವಿಸಿಕೊಳ್ಳುತ್ತೇನೆ. 11ನೇ ವರ್ಷಕ್ಕೆ ಬಹಳ ಚಿಕ್ಕ ವಯಸ್ಸಿನಲ್ಲಿಯೇ 1924ರಲ್ಲಿ ಬೆಳಗಾಂನಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮ ಗಾಂಧೀಜಿಯವರೂ ಒಳಗೊಂಡಂತೆ ಅನೇಕ ರಾಷ್ಟ್ರೀಯ ನಾಯಕರುಗಳ ಎದುರು ಸ್ವಾಗತ ಗೀತೆ ಹಾಡಿದರು. ಅದು ಇವತ್ತಿಗೂ ನೆನಪಿನಲ್ಲಿ ಉಳಿಯುವಂತಹ ಒಂದು ಘಟನೆಯಾಗಿದೆ.

ಹಾಗೆಯೇ, ತಮ್ಮ ಇಡೀ ಬದುಕನ್ನು ಕೊನೆಯವರೆಗೂ ಸಂಗೀತಕ್ಕೋಸ್ಕರ ಅರ್ಪಿಸಿಕೊಂಡಿದ್ದರು. ಗಂಗೂಬಾಯಿ ಹಾನಗಲ್‌ರವರ ಜೀವನ ಎಂದರೆ ಹಿಂದೂಸ್ತಾನಿ ಗಾಯನ, ಹಿಂದೂಸ್ತಾನಿ ಗಾಯನವೆಂದರೆ ಗಂಗೂಬಾಯಿ ಹಾನಗಲ್‌ರವರು. ಕೊನೆಯುಸಿರು ಇರುವವರೆಗೂ ತಮ್ಮ ಇಡೀ ಬದುಕನ್ನು ಸಂಪೂರ್ಣವಾಗಿ ಹಿಂದೂಸ್ತಾನಿ ಸಂಗೀತಕ್ಕೋಸ್ಕರ ಅರ್ಪಿಸಿಕೊಂಡು, ಹಿಂದೂಸ್ತಾನಿ ಗಾಯನವನ್ನೇ ಆರಾಧಿಸುತ್ತಾ ಬದುಕಿದಂತಹ ಒಬ್ಬ ಅಪರೂಪದ ಮಹಿಳೆ, ಅಪರೂಪದ ಗಾಯಕಿಯಾಗಿದ್ದರು ಎಂಬುದನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ. ಅದಕ್ಕೋಸ್ಕರ, ಇವರು ಸಂಗೀತ ಕ್ಷೇತ್ರದಲ್ಲಿ ಒಂದು ದಂತಕತೆಯಂತೆ ಬದುಕಿದ್ದರು. ಅನೇಕ ದೇಶ–ವಿದೇಶಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಸುಮಾರು 13 ವಿದೇಶಗಳಲ್ಲಿ ಮೂರು ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಪಾಕಿಸ್ತಾನದಲ್ಲೂ ಒಂದು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ಜಗತ್ತಿನಾದ್ಯಂತ ಲಕ್ಷಾಂತರ ಸಂಗೀತ ಪ್ರೇಮಿಗಳ ಮನಸೂರೆಗೊಂಡು, ಸಂಗೀತ ಪ್ರೇಮಿಗಳಿಗೆ ಸಂಗೀತ ರಸದೌತಣ ಬಡಿಸಿದ ಒಬ್ಬ ದೊಡ್ಡ ಸಂಗೀತಗಾರ್ತಿ ಎಂಬುದನ್ನು ಇವತ್ತು ನೆನಪಿಸಿಕೊಳ್ಳ ಬೇಕಾಗುತ್ತದೆ. ಅಂತಹ ಒಬ್ಬ ದೊಡ್ಡ ಮಹಿಳೆ, ಅಪಾರವಾಗಿ ಹೆಸರು ಗಳಿಸಿದ್ದ ಡಾ: ಗಂಗೂಬಾಯಿ ಹಾನಗಲ್‌ರವರಿಗೆ ಸ್ವಾಭಾವಿಕವಾಗಿ ಬಿರುದುಗಳು, ಪ್ರಶಸ್ತಿಗಳು ಬಹಳಷ್ಟು ಬಂದಿವೆ. ಸುಮಾರು 48–50 ಪ್ರಶಸ್ತಿಗಳು ಸಂದಿವೆ. ಭಾರತ ಸರ್ಕಾರ ಇವರಿಗೆ ಪದ್ಮಭೂಷಣ, ಪದ್ಮವಿಭೂಷಣವೆಂಬ ಎರಡು ಉನ್ನತ ಪ್ರಶಸ್ತಿಗಳನ್ನು ಕೊಟ್ಟು ಗೌರವಿಸಿದೆ. ಜೊತೆಗೆ, ವಿಶ್ವವಿದ್ಯಾನಿಲಯಗಳಿಂದ 7 ಡಾಕ್ಟರೇಟ್ ಪ್ರಶಸ್ತಿಗಳು, ಇವರು ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ಸಂಗೀತ ವಿಭಾಗಕ್ಕೆ Visiting Professor ಆಗಿದ್ದರು, ಸೆನೆಟ್ ಸದಸ್ಯರಾಗಿದ್ದರು. ದಿವಂಗತ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿರುವಾಗ ಕಾಂಗ್ರೆಸ್ ಸರ್ಕಾರವು ಗಂಗೂಬಾಯಿ

ಹಾನಗಲ್‌ರವರು ಸಂಗೀತ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಮೇಲ್ಮನೆಗೆ ನಾಮಕರಣ ಮಾಡಿತ್ತು. ಸುಮಾರು ಆರು ವರ್ಷಗಳ ಕಾಲ ಮೇಲ್ಮನೆಯಲ್ಲೂ ಇವರು ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆಂಬುದನ್ನು ನಾವು ಸ್ಮರಿಸಿಕೊಳ್ಳಬೇಕಾಗುತ್ತದೆ.

ಇದರ ಜೊತೆಗೆ, ಇವರು ಬಹಳ ದೊಡ್ಡ ಹೋರಾಟಗಳನ್ನು ಮಾಡಿದ್ದಾರೆ. ಗೋಕಾಕ್ ಚಳುವಳಿಯಲ್ಲಿ ಭಾಗವಹಿಸಿರುವುದು, ಧಾರವಾಡದಲ್ಲಿ ಹೈಕೋರ್ಟ್ ಮತ್ತು ಹೈಕೋರ್ಟ್ ಪೀಠಕ್ಕಾಗಿ ಹೋರಾಟ ನಡೆಸಿದ್ದರು. ತಮ್ಮ ಬದುಕನ್ನು ಅವರು ಕೇವಲ ಸಂಗೀತಕ್ಕಷ್ಟೇ ಸೀಮಿತಗೊಳಿಸಿಕೊಂಡಿರಲಿಲ್ಲ. ಇದರ ಅರ್ಥ ಅವರು ಸಮಾಜಮುಖಿಯಾಗಿ ಬದುಕಿದ್ದರು. ಸಮಾಜ ಸೇವೆಯಲ್ಲಿ ಅಪಾರವಾದ ಕಾಳಜಿ ಇಟ್ಟುಕೊಂಡಿದ್ದರು. ಅವರು ಸಂಗೀತದ ಮೂಲಕ ಸಮಾಜ ಸೇವೆಯೆಂದು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಅದಕ್ಕೋಸ್ಕರವೇ ತಮ್ಮ ಬದುಕನ್ನು ಸಂಪೂರ್ಣ ಅರ್ಪಿಸಿಕೊಂಡು ಬದುಕಿದಂತಹ ಒಬ್ಬ ಮಹಾನ್ ಸಂಗೀತ ಸಾಮ್ರಾಜ್ಞಿಯೆಂದು ಕರೆಯಬಹುದಾಗಿದೆ. ಆ ಕ್ಷೇತ್ರದಲ್ಲಿ ಅವರನ್ನು ಸಂಗೀತ ಸಾಮ್ರಾಜ್ಞಿಯೆಂದು ಕರೆದರೂ ಅದು ಅತಿಶಯೋಕ್ತಿಯಾಗಲಾರದು ಎಂಬುದು ನನ್ನ ಭಾವನೆಯಾಗಿದೆ. ಒಂದು ದಂತಕತೆಯಾಗಿ ನಮ್ಮೊಂದಿಗೆ ಬದುಕಿದಂತಹವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಅವರು ನಮ್ಮಿಂದ ದೂರವಾಗಿದ್ದಾರೆ. ಇವತ್ತು ಸಂಗೀತ ಕ್ಷೇತ್ರವು ಬಡವಾಗಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ. ಅವರ ಲಕ್ಷಾಂತರ ಅಭಿಮಾನಿಗಳಿಗೆ ಇವತ್ತು ನೋವಾಗಿದೆ, ಅವರೆಲ್ಲರೂ ದುಃಖಿತಪ್ತರಾಗಿದ್ದಾರೆ. ನಾವೆಲ್ಲರೂ ಅವರ ಸಾವಿನಿಂದಾಗಿ ಬಹಳ ದುಃಖಿತಪ್ತರಾಗಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈಗಾಗಲೇ ತಾವು ಸಲಹೆ ಕೊಟ್ಟಿದ್ದೀರಿ. ಅವರಿಗೆ ಭಾರತ ರತ್ನ ಪ್ರಶಸ್ತಿಯು ರಾಷ್ಟ್ರ ಮಟ್ಟದಲ್ಲಿ ಅತ್ಯಂತ ಉನ್ನತವಾದ ಪ್ರಶಸ್ತಿಯಾಗಿದ್ದು, ಆ ಪ್ರಶಸ್ತಿ ದೊರಕುವುದಕ್ಕೆ ಎಲ್ಲಾ ಅರ್ಹತೆಗಳೂ ಗಂಗೂಬಾಯಿ ಹಾನಗಲ್‌ರವರಿಗೆ ಇದೆಯೆಂದು ನಾನೂ ಕೂಡ ಇವತ್ತು ಗುರ್ತಿಸುತ್ತೇನೆ.

ಸರ್ಕಾರ ಈ ದಿಕ್ಕಿನಲ್ಲಿ ಅವರನ್ನು ಗೌರವಿಸತಕ್ಕ ಕೆಲಸವಾಗಿ ಮರಣೋತ್ತರವಾಗಿ ಪ್ರಶಸ್ತಿಯನ್ನು ನೀಡಲಿ ಎಂದು ಸರ್ಕಾರದ ಮೂಲಕ ಒತ್ತಾಯ ಮಾಡುತ್ತೇನೆ. ಅವರೇನು ನಮ್ಮನ್ನು ಅಗಲಿದ್ದಾರೆ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ. ಅವರ ಕುಟುಂಬ ವರ್ಗದ ಎಲ್ಲರಿಗೂ ಅವರ

ಸಾವಿನ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡಿ ಅವರ ಗೌರವಾರ್ಥ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಡಾ: ಗಂಗೂಬಾಯಿ ಹಾನಗಲ್‌ರವರ ಸಂತಾಪ ಸೂಚನೆಗೆ ತಾವೇನು ನಿರ್ಣಯವನ್ನು ತಂದಿದ್ದೀರಿ ಅದಕ್ಕೆ ಪೂರಕವಾಗಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಅವರು 1913 ರಲ್ಲಿ ಧಾರವಾಡದಲ್ಲಿ ಜನಿಸಿ ಸಂಗೀತ ಕ್ಷೇತ್ರದಲ್ಲಿ ಸಾಕಷ್ಟು ಕೀರ್ತಿಯನ್ನು ರಾಷ್ಟ್ರ ಮತ್ತು ರಾಜ್ಯ ವ್ಯಾಪ್ತಿಯಲ್ಲಿ ಮಾಡಿದ್ದಾರೆಂದರೆ ತಪ್ಪಾಗಲಾರದು. ಅದರಲ್ಲೂ 1924ರಲ್ಲಿ ಬೆಳಗಾವಿಯಲ್ಲಿ ನಡೆದಂಥ ಕಾಂಗ್ರೆಸ್ ಅಧಿವೇಶನದಲ್ಲಿ ಮಹತ್ಮಾ ಗಾಂಧಿಯವರನ್ನು ಭೇಟಿ ಮಾಡತಕ್ಕ ಅವಕಾಶವೂ ಅವರಿಗೆ ಒದಗಿತ್ತು ಎಂಬುದನ್ನು ನಾವುಗಳೆಲ್ಲರೂ ಈ ಸಂದರ್ಭದಲ್ಲಿ ಜ್ಞಾಪಕ ಮಾಡಿಕೊಳ್ಳ ಬೇಕಾಗುತ್ತದೆ. ಇದಲ್ಲದೆಯೇ ಅವರು ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಸುಮಾರು 9 ಪ್ರಧಾನ ಮಂತ್ರಿಗಳಿಂದ ಐವರು ರಾಷ್ಟ್ರಪತಿಗಳಿಂದ ಗೌರವಕ್ಕೆ ಪಾತ್ರರಾಗಿದ್ದಾರೆ. ಡಾ: ಗಂಗೂಬಾಯಿ ಹಾನಗಲ್‌ರವರು ಜನಪರ ಹೋರಾಟಗಾ ರರಾಗಿದ್ದು ಗೋಕಾಕ್ ಚಳುವಳಿ ಸಂದರ್ಭದಲ್ಲಿ, ಧಾರವಾಡದಲ್ಲಿ ಸಂಚಾರಿ ಹೈಕೋರ್ಟ್ ಪೀಠ ಸ್ಥಾಪನೆಯ ಹೋರಾಟದ ಸಂದರ್ಭದಲ್ಲಿ, ನೈರುತ್ಯ ರೈಲ್ವೇ ವಲಯದ ಹೋರಾಟದ ಸಂದರ್ಭದಲ್ಲಿ ಈ ರೀತಿ ಹಲವಾರು ಜನಪರ ಹೋರಾಟದ ಸಂದರ್ಭದಲ್ಲಿ ಭಾಗವಹಿಸಿದ್ದರು. ಜೊತೆಗೆ ಕರ್ನಾಟಕ ಸಂಗೀತ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರು. ಕರ್ನಾಟಕ ಸರ್ಕಾರ 1990 ರಿಂದ 1996ರವರೆಗೆ ಅವರನ್ನು ವಿಧಾನ ಪರಿಷತ್ತಿನ ಸದಸ್ಯರಾಗಿ ನಾಮಕರಣ ಮಾಡಿತ್ತು. ಲಕ್ಷಾಂತರ ಸಂಗೀತ ಅಭಿಮಾನಿಗಳು ಇವತ್ತು ಡಾ: ಗಂಗೂಬಾಯಿ ಹಾನಗಲ್‌ರವರನ್ನು ಕಳೆದುಕೊಂಡಿದ್ದಾರೆ. ಅವರ ಆತ್ಮಕ್ಕೆ ಭಗವಂತ ಶಾಂತಿಯನ್ನು ನೀಡಲಿ. ಅವರ ವ್ಯಕ್ತಿತ್ವವೇನಿದೆ ಅದಕ್ಕೆ ಮರಣೋತ್ತರ ಭಾರತ ರತ್ನ ಪ್ರಶಸ್ತಿಯನ್ನು ಕೊಡಬೇಕೆಂದು ಈ ಸದನದ ಮೂಲಕ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ಮಾಡಿ ಅದಕ್ಕೆ ಸಂಬಂಧಿಸಿದಂತೆ ಇಲ್ಲೇ ಒಂದು ನಿರ್ಣಯವನ್ನು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಇವತ್ತು ಡಾ: ಗಂಗೂಬಾಯಿ ಹಾನಗಲ್‌ರವರು ಮೃತರಾಗಿರುವ ಸಂದರ್ಭದಲ್ಲಿ ತಾವೇನು ಸಂತಾಪ ಸೂಚನೆಯನ್ನು

ಮಂಡಿಸಿದ್ದೀರಿ ಅದಕ್ಕೆ ನಾನೂ ನನ್ನ ಭಾವನೆಗಳನ್ನು ಕೂಡ ಪೂರ್ತಿ ಸೇರಿಸುತ್ತಾ ಆ ಸಂತಾಪ ಸೂಚನೆಗೆ ಅನುಮೋದನೆಯನ್ನು ಕೊಡುತ್ತಿದ್ದೇನೆ.

ಸಂಗೀತದಲ್ಲಿ ಸಪ್ತ ಸ್ವರಗಳಿರುತ್ತದೆಯೆಂದು ಹೇಳುತ್ತಾರೆ. ಆ ಸಪ್ತ ಸ್ವರಗಳ ರೀತಿ ನಮ್ಮ ನಾಡಿನಲ್ಲಿ ಅದೂ ವಿಶೇಷವಾಗಿ 7 ಜನ ಮಹನೀಯರು 1. ಸವಾಯಿ ಗಂಧರ್ವ 2. ಶ್ರೀಮತಿ ಗಂಗೂಬಾಯಿ ಹಾನಗಲ್ 3. ಬಸವರಾಜ್ ರಾಜಗುರು 4. ಮಲ್ಲಿಕಾರ್ಜುನ ಮನ್ಸೂರ್ 5. ಕುಮಾರ ಗಂಧರ್ವ 6. ಭಾರತ ರತ್ನ ಭೀಮಸೇನ ಜೋಶಿ 7. ಪಂಚಾಕ್ಷರಿ ಗವಾಯಿ. ಈ ರೀತಿ ಸಪ್ತ ಸ್ವರಗಳ ರೀತಿ ನಮ್ಮ ಈ 7 ಜನ ಮಹಾನ್ ಸಂಗೀತದಲ್ಲಿ ಸಾಧನೆ ಮಾಡಿದವರು ನಮ್ಮ ನಾಡಿನಲ್ಲಿ ಇದ್ದರು. ವಿಶೇಷವಾಗಿ ಇಡೀ ದೇಶಕ್ಕೆ, ನಾಡಿಗೆ ಸಂಗೀತ ಕ್ಷೇತ್ರದಲ್ಲಿ ಮೇಲ್ಪಂಕ್ತಿಯಾಗಿದ್ದರು ಎಂದು ನಾವೆಲ್ಲರೂ ಇವತ್ತು ಅರ್ಥ ಮಾಡಿಕೊಂಡಿದ್ದೇವೆ ಮತ್ತು ಒಪ್ಪಿಕೊಳ್ಳುತ್ತಿದ್ದೇವೆ. ಯಾವುದೇ ದೃಷ್ಟಿಯಿಂದ ನೋಡಿದಾಗ ಹಿಮಾಲಯ ಶಿಖರಗಳು ತಮ್ಮ ಎತ್ತರ ಮತ್ತು ಭವ್ಯತೆಗೆ ಬಹಳ ಪ್ರಸಿದ್ಧ. ಯಾವುದೇ ಕ್ಷೇತ್ರದಲ್ಲಿ ಮಹಾ ಸಾಧನೆ ಮಾಡಿದವರನ್ನು ಹಿಮಾಲಯ ಶಿಖರದ ಜೊತೆ ಹೋಲಿಸುತ್ತೇವೆ. ಆದರೆ, ಇವತ್ತು ಅಂಥ ಒಂದು ಶಿಖರ ಒಂದು ರೀತಿಯಲ್ಲಿ ನಮ್ಮಿಂದ ಕಾಣೆಯಾಗಿದೆ. ನಾನು ಆಗಲೇ ಹೇಳಿದಂತೆ ಡಾ: ಗಂಗೂಬಾಯಿ ಹಾನಗಲ್‌ರವರು 97 ವರ್ಷದ ಮಹಾನ್ ಚೇತನ ಕೊನೆಯ ದಿನಗಳವರೆಗೂ ಆ ಜೀವನೋಲ್ಲಾಸವನ್ನು ಇಟ್ಟುಕೊಂಡು ಬದುಕುತ್ತಿದ್ದವರು ಎಂಬುದು ತಮಗೆಲ್ಲರಿಗೂ ಗೊತ್ತಿದೆ. She was a great personality with many facets. ಮಾನ್ಯ ಸಿದ್ದರಾಮಯ್ಯನವರು ಈಗಾಗಲೇ ಹೇಳಿದಂತೆ ಆ ಎಳೆಯ ವಯಸ್ಸಿನಲ್ಲಿಯೇ ಕಾಂಗ್ರೆಸ್ ಅಧಿವೇಶನದಲ್ಲಿ ಹೇಗೆ ಇರಬಹುದು ಎಂಬುದನ್ನೇ ಊಹೆ ಮಾಡಿಕೊಳ್ಳುವುದೂ ಬಹಳ ಕಷ್ಟ. ಆ ಸ್ವಾಗತ ಗೀತೆಯನ್ನು ಹಾಡಿ ಆ ಒಂದು ಚೈತನ್ಯವನ್ನು ನಿರ್ಮಾಣ ಮಾಡಿದ್ದರು. ಜನಪರ ಹೋರಾಟಗಾರರು. ಸಂಗೀತದಲ್ಲಿ ಸಾಧನೆ ಮಾಡಿದ್ದು ಒಂದು ಭಾಗ. ಆದರೆ, ಜೀವನದ ಬೇರೆ ಕ್ಷೇತ್ರದಲ್ಲೂ ಕೂಡ ಯಾವ ರೀತಿ ತೊಡಗಿಸಿಕೊಳ್ಳುತ್ತಿದ್ದರು ಎಂಬುದನ್ನು ನೋಡಬೇಕಾಗುತ್ತದೆ. ಗೋಕಾಕ್ ಚಳುವಳಿಯ ಸಂದರ್ಭದಲ್ಲಿ ತಮ್ಮ ಭಾವನೆಯನ್ನು ವ್ಯಕ್ತಪಡಿಸುವುದಕ್ಕೋಸ್ಕರ ಕರ್ನಾಟಕ ಸಂಗೀತ ಮತ್ತು ನಾಟಕ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಪ್ರತಿಭಟಿಸಿದರು. ಅದು ಸಾತ್ವಿಕ ಆಕ್ರೋಶವಿರಬಹುದು.

ಆದರೆ, ಆ ಪ್ರತಿಭಟನೆ ಬಹಳ ಮುಖ್ಯ. ಹುಬ್ಬಳ್ಳಿಯಲ್ಲಿ ಶಾಂತಿ ನೆಲೆಸಬೇಕು, ಎಲ್ಲರ ನಡುವೆ ನೆಮ್ಮದಿ ಇರಬೇಕು ಎಂದು ಈದ್ಗಾ ವಿವಾಧದ ಶಾಂತಿ ಸಭೆಯಲ್ಲೂ ಕೂಡ ಸಕ್ರಿಯವಾಗಿ ಪಾಲ್ಗೊಂಡಿದ್ದರು. ವಿಶೇಷವಾಗಿ ಧಾರವಾಡದಲ್ಲಿ ಸಂಚಾರಿ ಹೈಕೋರ್ಟ್ ಪೀಠ ಸ್ಥಾಪನೆಯ ಬಗ್ಗೆ ಇರಬಹುದು, ನೈರುತ್ಯ ರೈಲ್ವೇ ವಲಯ ಸ್ಥಾಪನೆಯ ಬಗ್ಗೆ ಇರಬಹುದು ಆ ಹೋರಾಟಗಳಲ್ಲಿ ಭಾಗಿಯಾಗಿದ್ದರು. ಇಂಥ ಶ್ರೀಮತಿ ಗಂಗೂಬಾಯಿ ಹಾನಗಲ್ ರವರನ್ನು ನಾವು ಕಳೆದುಕೊಂಡಿದ್ದೇವೆ. ನಾನು ಕೆಲವು ಕಡೆ ಓದಿದ್ದೆ. ಭೀಮಸೇನ್ ಜೋಶಿಯವರನ್ನು ಯಾವ ರೀತಿಯಾಗಿ ಸ್ವಂತ ಸಹೋದರಿಯ ರೀತಿಯಲ್ಲಿ ಭೀಮೂ, ಭೀಮಣ್ಣ ಎಂದು ಪ್ರೋತ್ಸಾಹಿಸಿ ಉತ್ತೇಜನ ಕೊಟ್ಟಿದ್ದರು ಎಂಬುದು. ಯಾರಾದರೂ ತೀರಿಕೊಂಡಾಗ ಸಮಾಜ ಬಡವಾಯಿತು, ತಬ್ಬಲಿಯಾಯಿತು ಎಂದು ಹೇಳುವುದು ಸಾಮಾನ್ಯವಾದ ವಾಡಿಕೆ. ಆದರೆ, ಇವತ್ತು ಇಡೀ ನಾಡಿಗೆ ಆ ಭಾವನೆ ಬಂದಿದೆ. ಡಾ: ಗಂಗೂಬಾಯಿ ಹಾನಗಲ್ ರವರು ತೀರಿಕೊಂಡಿರುವ ಈ ಸಂದರ್ಭದಲ್ಲಿ ನಮ್ಮಲ್ಲಿ ಉಂಟಾಗಿರುವ ಈ ಕೊರತೆ ಬಹಳ ಕಾಲದವರೆಗೆ ಉಳಿಯುತ್ತದೆ. ಯಾರೂ ಕೂಡ ಆ ಜಾಗವನ್ನು ತುಂಬುವುದಕ್ಕೆ ಆಗುವುದಿಲ್ಲ. ಈ ಸಂದರ್ಭದಲ್ಲಿ ಏನು ನಮ್ಮ ಹಿರಿಯ ಸ್ನೇಹಿತರೆಲ್ಲರು ಮರಣೋತ್ತರ ಭಾರತ ರತ್ನ ಪ್ರಶಸ್ತಿಯನ್ನು ಕೊಡಬೇಕೆಂದು ಹೇಳಿದ್ದಾರೆ ಅದರ ಬಗ್ಗೆ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬಹುದು. ಅದರ ಜೊತೆಗೆ ನಮ್ಮ ಸರ್ಕಾರದಿಂದ ಇನ್ನೊಂದು ಕೆಲಸವನ್ನು ಮಾಡಬಹುದೆಂದು ನನಗನ್ನಿಸುತ್ತದೆ. ತಮ್ಮ ಸಂತಾಪ ಸೂಚನೆಯಲ್ಲಿ ಹೇಳಿರುವಂತೆ ಡಾ: ಗಂಗೂಬಾಯಿ ಹಾನಗಲ್‌ರವರು ಹಿಂದೂಸ್ಥಾನಿ ಸಂಗೀತದ ಅನಭಿಷಕ್ತ ರಾಣಿಯಾಗಿದ್ದರು. ಅದಕ್ಕೋಸ್ಕರ ಭಾರತದಲ್ಲಿ ರಾಷ್ಟ್ರ ಮಟ್ಟದಲ್ಲಿ ಯಾರು ಸಂಗೀತ ಕೇತ್ರದಲ್ಲಿ ಸಾಧನೆ ಮಾಡುತ್ತಾರೆ ಅವರಿಗೆ ಡಾ: ಗಂಗೂಬಾಯಿ ಹಾನಗಲ್‌ರವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ನಮ್ಮ ಕರ್ನಾಟಕ ಸರ್ಕಾರದಿಂದ ಕೊಡಬಹುದು. ಏಕೆಂದರೆ ಡಾ: ಗಂಗೂಬಾಯಿ ಹಾನಗಲ್‌ರವರು ನಮ್ಮ ಅನರ್ಘ್ಯ ರತ್ನ. ಈ ರೀತಿ ಅವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಟ್ಟು ಆ ಪ್ರತಿಭೆ ಸದಾ ಕಾಲ ಮನಸ್ಸಿನಲ್ಲಿ ಸಮಾಜದಲ್ಲಿ ಜೀವಂತವಾಗಿರಬೇಕು. ಆ ದೃಷ್ಟಿಯಿಂದ ನಮ್ಮ ಸರ್ಕಾರ ಯೋಚನೆ ಮಾಡಬಹುದು. ಇವತ್ತು ಸದನದ ಮತ್ತು ನಾಡಿನ ದುಃಖದಲ್ಲಿ ನಾನೂ ಕೂಡ ನನ್ನ ಭಾವನೆಯನ್ನು ಸೇರಿಸಿ ಈ

ಶ್ರದ್ಧಾಂಜಲಿಯ ಸಂತಾಪ ಸೂಚನೆಗೆ ನನ್ನ ಅನುಮೋದನೆಯನ್ನು ಕೊಡಬಯಸುತ್ತೇನೆ.

ಶ್ರೀ ಮುರುಗೇಶ್ ನಿರಾಣಿ (ಸಣ್ಣ ಮತ್ತು ದೊಡ್ಡ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಡಾ: ಗಂಗೂಬಾಯಿ ಹಾನಗಲ್‌ರವರು ಹಿಂದೂಸ್ಥಾನಿ ಸಂಗೀತದ ಮೂಲಕ, ಕರ್ನಾಟಕವನ್ನು ಜಗತ್ತಿಗೇ ಪರಿಚಯಿಸಿದ ಮಹಾ ಪ್ರತಿಭೆಯಾಗಿದ್ದರು. ಅವರ ನಿಧನದಿಂದಾಗಿ ಇವತ್ತು ದೇಶ ಒಂದು ಆಸ್ತಿಯನ್ನು ಕಳೆದುಕೊಂಡಂತಾಗಿದೆ. ದೇಶವ್ಯಾಪಿ ಅವರ ಅಭಿಮಾನ ಮತ್ತು ಶಿಷ್ಯ ಬಳಗಕ್ಕೆ ಆಗಿರುವ ನೋವಿನಲ್ಲಿ ನಾವೂ ಭಾಗಿಯಾಗಿದ್ದೇವೆ. ದಿವಂಗತ ಗಂಗೂಬಾಯಿ ಹಾನಗಲ್‌ರವರ ಸಂಗೀತ ಕ್ಷೇತ್ರದ ಕುರಿತಾದ ಎಲ್ಲಾ ಆಸೆ ಮತ್ತು ಆದರ್ಶಗಳನ್ನು ಪಾಲಿಸುವಲ್ಲಿ ಸರ್ಕಾರ ಆದ್ಯತೆ ನೀಡಲಿದೆ. ಅವರು ತಮ್ಮ ಹತ್ತನೆ ವಯಸ್ಸಿನಲ್ಲೇ ಸಂಗೀತ ಸೇವೆ ಆರಂಭಿಸಿ ಸತತ 80 ವರ್ಷಗಳ ಕಾಲ ದೇಶ–ವಿದೇಶಗಳಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಹರಡಿದಂಥವರು. ಆ ಕಾಲದಲ್ಲಿ ಒಬ್ಬ ಮಹಿಳೆಯಾಗಿ ಸಂಗೀತ ಕ್ಷೇತ್ರದಲ್ಲಿ ಮಾಡಿದ ಅಪಾರ ಸಾಧನೆ ವಿಶ್ವದಾಖಲೆಯೇ ಸರಿ. ಇಂಥ ಮಹಾ ತಾಯಿಗೆ ಐದು ಡಾಕ್ಟರೇಟ್ ಪದವಿ, ಜೊತೆಗೆ ದೇಶದ ವಿವಿಧ ಪ್ರತಿಷ್ಠಿತ ಪದವಿಗಳು, ಪ್ರಶಸ್ತಿಗಳು ಲಭಿಸಿವೆ. ಡಾ: ಗಂಗೂಬಾಯಿಯವರ ಸಾಧನೆ ಮತ್ತು ವ್ಯಕ್ತಿತ್ವದ ಬಗ್ಗೆ ಭಾರತ ರತ್ನ ಪ್ರಶಸ್ತಿಯೂ ಸಿಗಲೆಂದು ನಾವು ಆಶಿಸುತ್ತೇವೆ.

ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕಳೆದ ಬಜೆಟ್‌ನಲ್ಲಿ ನೀಡಿದ 5 ಕೋಟಿ ರೂ.ಗಳ ಅನುದಾನದ ವೆಚ್ಚದಲ್ಲಿ ಹುಬ್ಬಳ್ಳಿಯ ನೃಪತುಂಗದಲ್ಲಿ ಗಂಗೂಬಾಯಿ ಹಾನಗಲ್‌ರವರ ಸಂಗೀತ ಶಾಲೆಯನ್ನು ಮಾದರಿಯನ್ನಾಗಿ ನಿರ್ಮಿಸಲಾಗುತ್ತಿದೆ. ಅಲ್ಲದೆ ಧಾರವಾಡದ ಶುಕ್ರವಾರ ಪೇಟೆಯಲ್ಲಿರುವ ಅವರ ನಿವಾಸವನ್ನು 2 ಕೋಟಿ ರೂ.ಗಳ ವೆಚ್ಚದಲ್ಲಿ ನವೀಕರಿಸಲಾಗಿದೆ. ಈ ಎರಡೂ ಸ್ಥಳಗಳನ್ನು ಗಂಗೂಬಾಯಿಯವರನ್ನು ಸದಾ ಸ್ಮರಿಸುವ ಸುಂದರ ನೆಲವನ್ನಾಗಿ ಮಾರ್ಪಡಿಸಲಾಗುತ್ತದೆ. ಭಗವಂತ ಅವರ ಕುಟುಂಬಕ್ಕೆ ಮತ್ತು ಅವರ ಅಭಿಮಾನಿಗಳಿಗೆ ಈ ದುಃಖವನ್ನು ತಡೆದುಕೊಳ್ಳುವ ಶಕ್ತಿ ಕೊಡಲೆಂದು ಮತ್ತು ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ್ (ಹುಬ್ಬಳ್ಳಿ–ಧಾರವಾಡ ಪಶ್ಚಿಮ) : ಸನ್ಮಾನ್ಯ ಅಧ್ಯಕ್ಷರೆ, ಡಾ: ಶ್ರೀಮತಿ ಗಂಗೂಬಾಯಿ ಹಾನಗಲ್‌ರವರ ಬಗ್ಗೆ ಇವತ್ತು ತಾವು ಸಂತಾಪ ಸೂಚನೆಯನ್ನು ತಂದಿದ್ದೀರಿ. ಅದರ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸುತ್ತೇನೆ. ಡಾ: ಗಂಗೂಬಾಯಿ ಹಾನಗಲ್

ಕೇವಲ ಕರ್ನಾಟಕವಷ್ಟೇ ಅಲ್ಲ, ಭಾರತ ಸಂಗೀತ ಲೋಕದ ಒಂದು ದೊಡ್ಡ ನಿಧಿ ಎಂದರೆ ತಪ್ಪಾಗಲಾರದು. ಆ ಸಂಗೀತ ಲೋಕದ ದೊಡ್ಡ ನಿಧಿ ಇವತ್ತು ನಮಗೆ ಕಳಚಿದಂತಾಗಿದೆ. ಮೊದಲಿಗೆ ಶುಕ್ರವಾರಪೇಟೆಯಾಗಿದ್ದ ಧಾರವಾಡದಲ್ಲಿಯೇ ಅವರು ಇದ್ದು, ಸಂಗೀತದ ಅಭ್ಯಾಸವನ್ನು ಮಾಡಿದರು. ಅಂದಿನ ಅವರ ಬಡ ಕುಟುಂಬದಲ್ಲಿ ಅವರ ತಾಯಿಯಿಂದ ಸಂಗೀತದ ಅಭ್ಯಾಸವನ್ನು ಕಲಿತರು. ದೇಶದ ಮತ್ತು ಪ್ರಪಂಚದ ಸಂಗೀತ ಲೋಕಕ್ಕೆ ಬಹು ದೊಡ್ಡ ಒಂದು ನಿಧಿಯಾಗಿ, ಸಂಗೀತ ಲೋಕಕ್ಕೆ ಬಹು ದೊಡ್ಡ ಕೊಡುಗೆಯನ್ನು ಕೊಟ್ಟು, ಇವತ್ತು ನಮ್ಮಿಂದ ಅಗಲಿದ್ದಾರೆ. ಇವತ್ತು ಸಂಗೀತ ಲೋಕ ಬಹಳ ಬಡವಾಯಿತು ಎಂದು ಹೇಳಬೇಕಾಗುತ್ತದೆ. ಅವರಲ್ಲಿ ಬಹು ದೊಡ್ಡ ಆತ್ಮಶಕ್ತಿ ಇತ್ತು. ತಮ್ಮ ಮಗಳಾದ ಕೃಷ್ಣಾಜೋಷಿ ತಮ್ಮನ್ನು ಅಗಲಿದರೂ ಸಹಿತ, ಅವರು ತಮ್ಮ ಆತ್ಮಶಕ್ತಿ ಸತುವನ್ನಿಟ್ಟುಕೊಂಡು, ಇಷ್ಟು ದಿವಸವೂ ಸಹಿತ ಸಂಗೀತದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಇಲ್ಲಿಯವರೆಗೆ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ಸಂಗೀತವನ್ನು ನೀಡುತ್ತಲೇ ಇದ್ದರು. ಅವರು ಧಾರವಾಡದಲ್ಲಿ 1913 ಮಾರ್ಚ್ 5ರಂದು ಜನ್ಮ ತಾಳಿದರು. ಧಾರವಾಡದ ಸಂಗೀತ ಲೋಕದ ಎಲ್ಲರಿಗೂ ಅವರು ಸ್ಫೂರ್ತಿಯನ್ನು ನೀಡಿದರು. ಸಮಾಜ ಮುಖಿಯಾದಂತಹ ಮಹಿಳೆಯಾಗಿದ್ದ ಅವರು ಎಲ್ಲಾ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಕನ್ನಡ ನಾಡಿನ ಮತ್ತು ಸಂಗೀತ ಲೋಕದ ಬೆಳವಣಿಗೆಗೆ ರಾಷ್ಟ್ರಕ್ಕೆ ಮಾದರಿಯಾದಂತಹ ಸಮಾಜ ಮುಖಿಯಾದಂತಹ ಮಹಿಳೆ ಅವರಾಗಿದ್ದರು. ಅವರು ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ಬೆಳಗಾಂ ಕಾಂಗ್ರೆಸ್ ಅಧಿವೇಶನದಲ್ಲಿ ತಮ್ಮ ಸಂಗೀತದ ಮೂಲಕ ಅವರನ್ನು ಸ್ವಾಗತ ಮಾಡಿದ್ದರು. ಅವರು ಪದ್ಮ ವಿಭೂಷಣ ಪ್ರಶಸ್ತಿಯನ್ನು ಪಡೆದಿದ್ದರು. ಅವರು ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ, ಕರ್ನಾಟಕ ಯೂನಿವರ್ಸಿಟಿಯಲ್ಲಿ ಸೆನೆಟ್‌ನ ಸದಸ್ಯರಾಗಿ ಕೆಲಸ ಮಾಡಿದ್ದರು. ಇಡೀ ದೇಶದಲ್ಲೇ ಬಹಳ ಮಹತ್ವದ ಸ್ಥಾನವನ್ನು ಪಡೆದಂತಹ ಕರ್ನಾಟಕ ಯೂನಿವರ್ಸಿಟಿಯಲ್ಲಿ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿ ಸಂಗೀತ ಲೋಕಕ್ಕೆ ದೊಡ್ಡ ಲೋಕಕ್ಕೆ ಕೊಡುಗೆಯನ್ನು ಅವರು ಕೊಟ್ಟಿದ್ದಾರೆ. ಅವರು ಈ ರಾಜ್ಯದ ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರಲು ಹಮ್ಮಿಕೊಂಡ ಗೋಕಾಕ್ ಚಳುವಳಿಯಲ್ಲಿ ಭಾಗವಹಿಸಿದ್ದರು. ಹೈಕೋರ್ಟ್ ಪೀಠದ ಹೋರಾಟದಲ್ಲೂ ಸಹ ಭಾಗವಹಿಸಿದ್ದರು. ರೈಲ್ವೆ Zoneಗಾಗಿ ನಡೆದಂತಹ ಹೋರಾಟದಲ್ಲೂ

ಅವರು ಪಾಲ್ಗೊಂಡಿದ್ದರು. ಈ ಎಲ್ಲಾ ಜನಪರವಾದಂತಹ ಕಾರ್ಯದಲ್ಲಿ ಒಬ್ಬ ಸಂಗೀತ ವಿದೂಷಿಯಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅವರು ಕೇವಲ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲದೆ, ಭಾರತದಲ್ಲಿರುವ ಎಲ್ಲಾ ರಾಜ್ಯಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದರು. ಅಲ್ಲದೆ ಅಮೆರಿಕಾ, ಜರ್ಮನ್ ಮತ್ತು ಕೆನಡಾ ಸೇರಿದಂತೆ ಪ್ರಪಂಚದ ಅನೇಕ ಭಾಗಗಳಲ್ಲಿ ಸಂಗೀತ ಕಾರ್ಯಕ್ರಮವನ್ನು ನೀಡಿದಂತಹ ಗಂಗೂಬಾಯಿಯವರು ಇವತ್ತು ನಮ್ಮಿಂದ ಅಗಲಿದ್ದಾರೆ. ಈ ಒಂದು ಧಾರವಾಡ ಏನಿದೆ, ಕೇವಲ ಗಂಗೂಬಾಯಿ ಅವರನ್ನು ಮಾತ್ರವೇ ನಮಗೆ ಕೊಟ್ಟಿಲ್ಲ. ಅವರ ಸಹೋದರರಾದಂತಹ ಭೀಮಸೇನ್ ಜೋಷಿಯಂತಹವರನ್ನು, ಮಲ್ಲಿಕಾರ್ಜುನ ಮನ್ಸೂರ್ ಅಂತಹವರನ್ನು, ಬಸವರಾಜ್ ರಾಜ್‌ಗುರು ಅಂತಹವರನ್ನು, ಸವಾಯಿ ಗಂಧರ್ವರವರನ್ನು, ಕುಮಾರ್ ಗಂಧರ್ವರವರನ್ನು, ಎಲ್ಲರಿಗೂ ಸಂಗೀತವನ್ನು ಹೇಳಿಕೊಟ್ಟಂತಹ ಗುರುರಾವ್ ದೇಶಪಾಂಡೆಯವರನ್ನೂ ಸಹ ಕೊಟ್ಟಿದೆ. ಇವರೆಲ್ಲರೂ ಜೊತೆಗೆ ಆ ತಾಯಿ ಜೊತೆಗೆ ಸಹೋದರರಂತೆ ನಡೆದುಕೊಂಡು ಈ ಸಂಗೀತ ಲೋಕಕ್ಕೆ ಬಹು ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಈಗಾಗಲೇ ಅನೇಕ ಹಿರಿಯರು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲೆಂದು ಪ್ರಾರ್ಥಿಸಿದ್ದಾರೆ. ನಮ್ಮ ನಾಯಕರಾದಂತಹ ಮುಖ್ಯಮಂತ್ರಿಗಳು 5 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅವರ ಹೆಸರಿನಿಂದ ಸಂಗೀತ ಶಾಲೆ ಮಾಡುವುದಾಗಿ ಹೇಳಿ, ಒಂದು ದೊಡ್ಡ ಲೋಕಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಆ ಕಟ್ಟಡ ಈಗ ಹುಬ್ಬಳ್ಳಿಯಲ್ಲಿ ಬರುತ್ತಿದೆ. ಅದಲ್ಲದೆ, ಇವತ್ತು ಅನೇಕ ಹಿರಿಯರು ಅವರ ಬಗ್ಗೆ ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಮುಖ್ಯಮಂತ್ರಿಗಳು ಈಗಾಗಲೇ ಅನೇಕ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದಾರೆ. ಆ ಘೋಷಣೆಗಳೆಲ್ಲಾ ಅನುಷ್ಠಾನವಾಗುವುದು ಬಹಳ ಮುಖ್ಯ. ಇದರಿಂದ ಸಂಗೀತ ಲೋಕದ ಎಲ್ಲಾ ಯುವ ಪೀಳಿಗೆಗೆ ಸ್ಫೂರ್ತಿಯನ್ನು ನೀಡಿದಂತಾಗುತ್ತದೆ. ಗಂಗೂಬಾಯಿ ಹಾನಗಲ್‌ರವರ ಹೆಸರು ಚಿರಸ್ಥಾಯಿಯಾಗಿ ಇರುವುದಕ್ಕೆ, ಈ ಸಂಗೀತ ಲೋಕ ಬೆಳವಣಿಗೆ ಆಗಲಿಕ್ಕೆ ಆ ಕಾರ್ಯವನ್ನು ಮಾಡುತ್ತೇವೆಂದು ನಮ್ಮ ಮುಖ್ಯಮಂತ್ರಿಗಳು ಇವತ್ತು ಆಶ್ವಾಸನೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಸಂಗೀತ ಲೋಕದ ಬೆಳವಣಿಗೆಗೆ ಇವೆಲ್ಲವೂ ಸಹಾಯಕವಾಗಲಿ. ಅವರ ಜೀವನಕ್ಕೆ ಶಾಂತಿ ದೊರಕಲಿ, ಅವರನ್ನು ಅಗಲಿಕೆಯಿಂದ ದುಃಖದಲ್ಲಿರುವ ಸಂಗೀತ ಲೋಕದ ಎಲ್ಲಾ ಜನರಿಗೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ.

ತಾವು ನಾಲ್ಕು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮತ್ತೊಮ್ಮೆ ತಮಗೆ ವಂದಿಸುತ್ತೇನೆ. ಇವತ್ತಿನ ದಿವಸ ಧಾರವಾಡದ ನಾವೆಲ್ಲರೂ ಸಹ ಹುಬ್ಬಳ್ಳಿಗೆ ಹೋಗಿ ಅವರ ಅಂತಿಮ ದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇವೆ ಎಂದು ತಮ್ಮ ಮೂಲಕ ತಿಳಿಸಬಯಸುತ್ತೇನೆ.

ನಮಸ್ಕಾರ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) : ಸನ್ಮಾನ್ಯ ಅಧ್ಯಕ್ಷರೆ, ಡಾ: ಶ್ರೀಮತಿ ಗಂಗೂಬಾಯಿ ಹಾನಗಲ್‌ರವರ ನಿಧನದ ಬಗ್ಗೆ ತಾವು ಸಭೆಯ ಮುಂದೆ ಮಂಡಿಸಿರುವ ಸಂತಾಪ ಸೂಚನೆಯನ್ನು ನಾನು ಬೆಂಬಲಿಸುತ್ತೇನೆ. ತಾವು ಸಂತಾಪ ಸೂಚನೆ ಮಂಡಿಸುವುದರ ಧಾರವಾಡದಂತಹ ಪುಣ್ಯ ನೆಲದಲ್ಲಿ ಹುಟ್ಟಿದಂತಹ ನೀವು ತಮ್ಮ ಭಾವನೆಗಳನ್ನು ಸದನದಲ್ಲಿ ಹಂಚಿಕೊಂಡಿದ್ದೀರಿ. ತಾವು ಹಂಚಿಕೊಂಡಿರುವ ತಮ್ಮ ಭಾವನೆಗಳು ನಮಗೆ ಅರ್ಥವಾಗುತ್ತದೆ. ಮಾನ್ಯ ಸಭಾ ನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಸದಸ್ಯರೂ ಕೂಡ ಅದಕ್ಕೆ ತಮ್ಮ ಧ್ವನಿಗೂಡಿಸಿದ್ದಾರೆ. ಗಂಗೂಬಾಯಿ ಹಾನಗಲ್ ರವರನ್ನು, ಅವರ ವೈವಿಧ್ಯಮಯವಾಗಿರುವಂತಹ ಪ್ರತಿಭೆಯನ್ನು, ನಾನಾ ರೀತಿಯಲ್ಲಿ ಹಾಡಿ ಹೊಗಳುವಂತಹ ಕೆಲಸವನ್ನು ಮಾಡಿದ್ದಾರೆ. ಬಹುಶಃ ಅವರು ಮಾಡಿದಂತಹ ಸಾಧನೆಗೆ ನಾವು ಎಷ್ಟು ಶಬ್ದಗಳನ್ನು ಸೇರಿಸಿದರೂ ಕೂಡ ಅದು ಸಾಲದು ಎನ್ನತಕ್ಕಂಥ ರೀತಿಯಲ್ಲಿ ನಾವು ಹೇಳಬೇಕಾಗುತ್ತದೆ. ಇದೊಂದು ವಿಶಿಷ್ಟವಾದಂತಹ ಪ್ರತಿಭೆ. ಸ್ವಾತಂತ್ರ್ಯ ಪೂರ್ವದಲ್ಲಿ ಅತ್ಯಂತ ಚಿಕ್ಕ ವಯಸ್ಸಿನಲ್ಲೇ, ಬೆಳಗಾಂನಲ್ಲಿ ನಡೆದಂತಹ ಮಹಾತ್ಮ ಗಾಂಧಿಯವರ ನೇತೃತ್ವದ 1924ರ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಸ್ವಾಗತ ಗೀತೆಯನ್ನು ಹಾಡಿ, ಜನರ ಮೆಚ್ಚುಗೆಯನ್ನು ಗಳಿಸಿದ್ದರು ಎನ್ನುವುದು ಇವತ್ತು ಕೂಡ ಜನಜನಿತವಾಗಿ ರತಕ್ಕಂಥ ವಿಚಾರವಾಗಿದೆ. ಅಂತಹ ಮೇರು ಪ್ರತಿಭೆ ಅವರದು. ಅವರು ಕೇವಲ ಅದೊಂದೇ ಅಲ್ಲದೆ, ತಮ್ಮನ್ನು ತಾವೇ ಸಮಾಜದ ಕೆಲಸದಲ್ಲಿ ಅರ್ಪಿಸಿಕೊಂಡಿದ್ದರು. ಸರ್ಕಾರದವರು ಅವರ ಸಾಧನೆ ಗುರುತಿಸಿ ಅವರನ್ನು ವಿಧಾನ ಪರಿಷತ್ತಿಗೆ ನಾಮಕರಣ ಮತ್ತು ಯೂನಿವರ್ಸಿಟಿಗಳಿಗೆ ನಾಮಕರಣ ಮಾಡಿದರು. ಅನೇಕ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥ ಅವಕಶ ಕೂಡ ಅವರಿಗೆ ಒದಗಿ ಬಂದಿತು. ಜೊತೆಗೆ ಅತ್ಯಂತ ಪ್ರತಿಷ್ಟಿತವಾಗಿರತಕ್ಕಂಥ ರಾಷ್ಟ್ರ ಮಟ್ಟದ ಪದ್ಮವಿಭೂಷಣ, ಪದ್ಮಭೂಷಣ ಪ್ರಶಸ್ತಿಗಳನ್ನು ಸಹ ಅವರು ಪಡೆದಿದ್ದರು. ಅದರ ಜೊತೆಗೆ ಏಳು ಡಾಕ್ಟರೇಟ್ ಮತ್ತು ಇನ್ನಿತರ ಬೇರೆ ಬೇರೆ ಪದವಿಗಳ

ಗೌರವಕ್ಕೆ ಅವರು ಪಾತ್ರರಾಗಿದ್ದರು. ಬಹುಶಃ ಯಾವ ಶಬ್ದದಿಂದಲೂ ಕೂಡ ಅವರು ಮಾಡಿದಂತಹ ಸಾಧನೆಯನ್ನು ನಾವು ವರ್ಣಿಸಲು ಸಾಧ್ಯವಿಲ್ಲ. ಧಾರವಾಡದಲ್ಲಿ ಹುಟ್ಟಿದ ಅವರು ಧಾರವಾಡದ ಸ್ಥಳೀಯವಾದಂತಹ ಸಮಸ್ಯೆಗಳಿಗೂ ಕೂಡ ಸ್ಪಂದಿಸಿದ್ದರು. ಈದ್ಗಾ ಮೈದಾನದ ವಿಚಾರದಲ್ಲೂ ಕೂಡ ಭಾಗವಹಿಸಿ, ಅದಕ್ಕೆ ಸ್ಪಂದನೆಯನ್ನು ತೋರಿಸಿದ್ದರು. ಹೈಕೋರ್ಟ್ ಪೀಠ ಆಗಬೇಕಾದಂತಹ ಸಂದರ್ಭದಲ್ಲಿ ಕೂಡ ಸ್ಪಂದಿಸಿದ್ದರು. ಈ ಎಲ್ಲಾ ವಿಚಾರಗಳನ್ನು ನೋಡಿದಾಗ ನಿಜವಾಗಿಯೂ ಅತ್ಯಂತ ಮೆಚ್ಚಬೇಕಾಗಿರತಕ್ಕಂಥ ಪ್ರತಿಭೆ ಅವರದು ಎಂದರೆ ತಪ್ಪಾಗಲಾರದು.

ಬಹುಶಃ ಈ ದೇಶದಲ್ಲಿ ಕೆಳಸ್ತರದ ಒಬ್ಬ ಹೆಣ್ಣುಮಗಳು ಇಷ್ಟೊಂದು ಎತ್ತರಕ್ಕೆ ಬೆಳೆದು, ಇವತ್ತು ಆ ಹೆಣ್ಣುಮಗಳು ಮಾಡಿದಂಥ ಸಾಧನೆಯನ್ನು ಬೇರೊಬ್ಬ ಹೆಣ್ಣುಮಗಳು ಮಾಡಲಿಲ್ಲವೆಂದು ನಾನು ಭಾವಿಸುತ್ತೇನೆ. ನಾವು ಅಂಥ ಒಂದು ಪ್ರತಿಭೆಯನ್ನು ಕಳೆದುಕೊಂಡಿದ್ದೇವೆ. ಧಾರವಾಡಕ್ಕೆ ಯಾರೇ ಪ್ರತಿಷ್ಠಿತ ವ್ಯಕ್ತಿಗಳು ಹೋದಾಗ ಮೊದಲನೆ ಕರ್ತವ್ಯವೆಂದರೆ, ಡಾ: ಗಂಗೂಬಾಯಿ ಹಾನಗಲ್‌ರವರ ಮನೆಗೆ ಹೋಗಬೇಕು, ಅವರ ಯೋಗಕ್ಷೇಮ ಮತ್ತು ಆರೋಗ್ಯವನ್ನು ವಿಚಾರಿಸಬೇಕೆನ್ನುವ ರೀತಿಯಲ್ಲಿ ಪ್ರತಿನಿತ್ಯ ಗಂಗೂಬಾಯಿ ಹಾನಗಲ್‌ರವರನ್ನು ಭೇಟಿ ಮಾಡುವುದನ್ನು ನಾವು ನೋಡುತ್ತಿದ್ದೇವೆ. ನಿಜವಾಗಿಯೂ ಕೂಡ ತಾವು ಕೊನೆಯ ಗಳಿಗೆಯಲ್ಲಿ, ಅಲ್ಲಿ ಹೋದಂಥ ಸಂದರ್ಭದಲ್ಲಿ ನಾವು ಅದನ್ನು ಮಾಧ್ಯಮದಲ್ಲಿ ನೋಡಿದೆವು, ಎಲ್ಲೋ ಒಂದು ಕಡೆ ಅವರು ಆಸ್ಪತ್ರೆಯಿಂದ ವಾಪಸ್ ಬರುತ್ತಾರೆನ್ನುವ ವಿಶ್ವಾಸವಿತ್ತು. ನೀವು ಹೋದ ಮೇಲಂತೂ ಕೂಡ ನನಗೆ ಬಹಳ ನಂಬಿಕೆ ಇತ್ತು, ಆದರೆ ಇವತ್ತು ಆ ವಿಧಿ ಎನ್ನುವುದು ಯಾರ ಕೈಯಲ್ಲೂ ಇಲ್ಲ, ಇವತ್ತು ಅವರು ಕಾಲಗರ್ಭದಲ್ಲಿ ಸೇರಿದ್ದಾರೆ. ಕಾಲಗರ್ಭದಲ್ಲಿ ಸೇರಿದ ಅವರಿಗೆ ಎಲ್ಲಾ ರೀತಿಯ ಗೌರವವನ್ನು ಕೊಟ್ಟು ಅಂತ್ಯಸಂಸ್ಕಾರವನ್ನು ಮಾಡುವುದರ ಜೊತೆಗೆ ಇವತ್ತು ಸದನವನ್ನು ಮುಂದಕ್ಕೆ ಹಾಕುವ ನಿರ್ಣಯವನ್ನು ಮಾಡುತ್ತೀರಿ ಎನ್ನುವ ಭಾವನೆಯನ್ನು ನಾನು ವ್ಯಕ್ತಪಡಿಸುತ್ತೇನೆ. ಅದರ ಜೊತೆಗೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು, ಸಂಗೀತ ಕ್ಷೇತ್ರದಲ್ಲಿ ಮಾಡುವ ವಿಶ್ವವಿದ್ಯಾನಿಲಯಕ್ಕೆ ಡಾ: ಶ್ರೀಮತಿ ಗಂಗೂಬಾಯಿ ಹಾನಗಲ್‌ರವರ ಹೆಸರಿನಲ್ಲಿ ಅದನ್ನು ಮಾಡುತ್ತೀರೆಂಬುದು ಅತ್ಯಂತ ಸ್ವಾಗತಾರ್ಹವಾಗಿರುವ ವಿಚಾರವೆಂದು ಹೇಳುತ್ತೇನೆ. ಜೊತೆಗೆ ಅವರ ಹೆಸರು ಯಾವಾಗಲೂ, ಎಂಥ ಸಂದರ್ಭದಲ್ಲೂ ಕೂಡ

ನೆನಪಿಸಿಕೊಳ್ಳುವಂತಾಗಬೇಕು. ಇವತ್ತು ದೊಡ್ಡವರಿಗೆ ಸಾವಿಲ್ಲ, ಅವರು ಯಾವಾಗಲೂ ನಮ್ಮ ಮಧ್ಯದಲ್ಲಿರುವ ರೀತಿಯಲ್ಲಿ ನೆನಪಿಸಿಕೊಳ್ಳುವಂಥ ಕಾರ್ಯಕ್ರಮಗಳನ್ನು ಮಾಡುವುದು ಬಹಳ ಮುಖ್ಯವೆನ್ನುವ ಮಾತನ್ನು ಹೇಳುತ್ತೇನೆ. ಬಹುಶಃ ಅವರ ಕುಟುಂಬ ವರ್ಗದವರಿಗಿಂತ ಹೆಚ್ಚಾಗಿ ಈ ದೇಶದಲ್ಲಿರುವ ಲಕ್ಷಾಂತರ ಮಂದಿಗೆ ಅವರ ಅಗಲಿಕೆಯಿಂದಾಗಿ ನೋವಾಗಿದೆ, ಆ ನೋವಿನಲ್ಲಿ ನಾವೂ ಕೂಡ ಭಾಗಿಗಳು ಎನ್ನುವ ಮಾತನ್ನು ಹೇಳಿ, ಏನು ಇವತ್ತು ಸಂತಾಪ ಸೂಚನೆಯನ್ನು ತರಲಾಗಿದೆ ಅದನ್ನು ನಾನು ಧನಿಗೂಡಿಸುತ್ತೇನೆ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ–ಧಾರವಾಡ ಪೂರ್ವ) : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ಊರಿನಲ್ಲಿ ಹುಟ್ಟಿ ಕನ್ನಡಾಂಬೆಯ ಹೆಮ್ಮೆಯ ಪುತ್ರಿಯಾಗಿ ಭಾರತದ ಕೀರ್ತಿಪತಾಕೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಈ ಸಂಗೀತ ಲೋಕದ ವಿಚಾರವನ್ನು ಬೆಳೆಸಿದಂಥವರು. ತಮ್ಮ ವಯೋವೃದ್ಧ ಇಳಿವಯಸ್ಸಿನಲ್ಲೂ ಕೂಡ ಕ್ರಿಯಾಶೀಲ ಚೈತನ್ಯದ ಚುಲುಮೆಯಾಗಿದ್ದ ಡಾ: ಗಂಗಜ್ಜಿಯವರು ನಮ್ಮೆಲ್ಲರಿಗೂ ಒಂದು ರೀತಿಯ ತಾಯ್ತನದ ಪ್ರೀತಿಯನ್ನು ತೋರಿಸಿದಂಥವರು. ಕಳೆದ 15 ದಿವಸಗಳ ಹಿಂದೆ ಹುಬ್ಬಳ್ಳಿಯ ಆಸ್ಪತ್ರೆಯೊಂದರ ನಿಗಾಘಟಕದಲ್ಲಿ ಇಟ್ಟಾಗಲೂ ಕೂಡ ವೈದ್ಯರ ಪ್ರತಿರೋಧ ಎದುರಿಸಿ, ನನಗೆ ಮಾತನಾಡಿಸಲು ಬರುವವರನ್ನು ಮುಕ್ತವಾಗಿ ಬಿಡಿ, ನಿಮ್ಮ ವೈದ್ಯಕೀಯ ಉಪಚಾರಕ್ಕಿಂತ ನನ್ನನ್ನು ಮಾತನಾಡಿಸಲು ಬರುವವರಿಂದ ಹಾರೈಕೆಯಾಗುತ್ತೇನೆ ಎನ್ನುವ ಒಂದು ತಾಯ್ತನದ ಪ್ರೀತಿಯನ್ನು ತೋರಿಸಿ, ಮತ್ತೆ ಆಸ್ಪತ್ರೆಯಿಂದ ಚೇತರಿಸಿಕೊಂಡು ಮನೆಗೆ ತೆರಳಿದರು. ಇಂದು ಅವರ ನಿಧನದಿಂದ ನಮಗೆ, ಒಂದು ಕನ್ನಡ ನಾಡಿಗೆ ಹಾಗೂ ಭಾರತಕ್ಕೆ, ಸಂಗೀತ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ಅಂಥ ಗಂಗೂಬಾಯಿ ಈ ನಾಡಿನ ಕೀರ್ತಿಪತಾಕೆಯನ್ನು, ಭಾರತದ ಕೀರ್ತಿಪತಾಕೆಯನ್ನು ಬೆಳೆಸತಕ್ಕಂಥ ದಿವ್ಯಚೇತನ ನಮ್ಮ ನಾಡಿನಲ್ಲಿ ಮತ್ತೆ ಹುಟ್ಟಿಬರಲೆಂದು ನನ್ನ ನುಡಿನಮನಗಳನ್ನು ಈ ಸದನದ ಮೂಲಕ ಗಂಗಜ್ಜಿಗೆ ಅರ್ಪಿಸುತ್ತೇನೆ. ಅವರು ಬದುಕಿರುವಾಗಲೇ, ಅವರ ಕೋರಿಕೆಯಂತೆ ಅಡಿಗಲ್ಲು ಸಮಾರಂಭ ಮಾಡಿದ ಒಂದು ವರ್ಷದಲ್ಲಿಯೇ ಅವರ ಒಂದು ಗುರುಕುಲದ ಸಂಗೀತ ಶಾಲೆಯ ಕಟ್ಟಡವನ್ನು ನಿರ್ಮಾಣ ಮಾಡುತ್ತಿರುವುದು ಒಂದು ಅಭಿಮಾನದ

ಸಂಗತಿಯಾಗಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸಭಾಧ್ಯಕ್ಷರಿಗೂ ನನ್ನ ವಂದನೆಗಳನ್ನು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಸಿ.ಪಾಟೀಲ್ (ಹೀರೆಕೆರೂರು) : ಸನ್ಮಾನ್ಯ ಅಧ್ಯಕ್ಷರೆ, ಶ್ರೀಮತಿ ಗಂಗೂಬಾಯಿ ಹಾನಗಲ್‌ರವರು ಇವತ್ತು ನಮ್ಮನ್ನಗಲಿರುವುದು ಕರ್ನಾಟಕಕ್ಕೆ ಅಷ್ಟೆ ಅಲ್ಲ, ಇಡೀ ಭಾರತ ದೇಶದ ಸಂಗೀತ ಲೋಕಕ್ಕೆ ಆದ ಒಂದು ದೊಡ್ಡ ನಷ್ಟವೆಂದು ಹೇಳಿದರೆ ತಪ್ಪಾಗುವುದಿಲ್ಲ. ಸಾವಿರಕ್ಕೆ ಒಬ್ಬ ಕಲಾವಿದ, ಲಕ್ಷಕ್ಕೆ ಒಬ್ಬ ಕಲಾವಿದ, ಕೋಟಿಗೆ ಒಬ್ಬ ಕಲಾವಿದ ಎಂದು ಹೇಳುತ್ತಾರೆ. ಕಲೆ ಎಲ್ಲರನ್ನೂ ಕೈಬಿಸಿ ಕರೆಯುತ್ತದೆ ಆದರೆ ಕೆಲವೆ ಜನರನ್ನು ಅಪ್ಪಿಕೊಳ್ಳುತ್ತದೆಂದು ಹೇಳುತ್ತಾರೆ. ಹಾಗೆ ಕಲೆ ಅಪ್ಪಿಕೊಂಡಿದ್ದರಲ್ಲಿ ಶ್ರೀಮತಿ ಗಂಗೂಬಾಯಿ ಹಾನಗಲ್‌ರವರು ಒಬ್ಬರು. ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದು ಅಸಾಮಾನ್ಯ ಎತ್ತರಕ್ಕೆ ಏರಿ, ಒಬ್ಬ ಸಂಗೀತ ತಪಸ್ವಿನಿಯಾಗಿ, ಅನಭಿಶಕ್ತದೊರೆಯಾಗಿ ಸಂಗೀತ ಲೋಕಕ್ಕೆ ತಮ್ಮದೆ ಆದ ಕೊಡುಗೆಯನ್ನು ನೀಡಿದ್ದಾರೆ. ಇವತ್ತು ಶ್ರೀಮತಿ ಗಂಗೂಬಾಯಿ ಹಾನಗಲ್‌ರವರು ಸಾವನ್ನಪ್ಪಿದ್ದಾರೆ ಆದರೆ ಅವರು ಕೊಟ್ಟಂಥ ಹಾಡುಗಳು, ಅವರೇನು ಸಂಗೀತವನ್ನು ನೀಡಿದ್ದಾರೆ, ಅದಕ್ಕೆ ಸಾವಿಲ್ಲ, ಅದು ಅಜರಾಮರವಾಗಿ ಯಾವತ್ತೂ ಕೂಡ ಇರುತ್ತೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಉತ್ತರ ಕರ್ನಾಟಕ ಕಲಾವಿದರ ಒಂದು ತವರೂರು. ಕಲಾವಿದರಿಗೆ ಅನ್ನ ಕೊಡುವ ಊರು ಯಾವುದೆಂದರೆ, ಉತ್ತರ ಕರ್ನಾಟಕ ಎಂದು ಹೇಳುತ್ತಾರೆ. ಹಾಗೆ ಉತ್ತರ ಕರ್ನಾಟಕದ ಅಪ್ರತಿಮ ಪ್ರತಿಮೆಯಾಗಿ ಸಂಗೀತ ಲೋಕಕ್ಕೆ ಸೇವೆಯನ್ನು ಅವರು ಸಲ್ಲಿಸಿದ್ದಾರೆ. ಗಂಗೂಬಾಯಿ ಹಾನಗಲ್‌ರವರು ಸಂಗೀತವನ್ನು ಬೆನ್ನತ್ತಿದರು ಆದರೆ ಪ್ರಶಸ್ತಿಗಳು ಗಂಗೂಬಾಯಿ ಹಾನಗಲ್‌ರವರ ಬೆನ್ನತ್ತಿದವು. ಅವರು ಎಂದೂ ಪ್ರಶಸ್ತಿಗಳನ್ನು ಹುಡುಕಿಕೊಂಡು ಹೋಗಲಿಲ್ಲ, ಆದರೆ ಪ್ರಶಸ್ತಿಗಳು ತಮ್ಮಷ್ಟಕ್ಕೆ ತಾವೆ ಅವರನ್ನು ಹಿಂಬಾಲಿಸಿದವು ಎಂಬುದು ನಮ್ಮೆಲ್ಲರಿಗೂ ಒಂದು ಹೆಮ್ಮೆಯ ವಿಷಯ. ಹಿಂದೆ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಧಾರವಾಡ ಜಿಲ್ಲೆ ಪ್ರವಾಸ ಕೈಗೊಂಡಂಥ ಸಂದರ್ಭದಲ್ಲಿ ಅವರೊಂದಿಗೆ ಹೋಗಿ ಶ್ರೀಮತಿ ಗಂಗೂಬಾಯಿ ಹಾನಗಲ್‌ರವರ ಆಶೀರ್ವಾದವನ್ನು ಪಡೆದುಕೊಳ್ಳುವಂಥ ಒಂದು ಅವಕಾಶವಾಯಿತು. ಇವತ್ತು ಶ್ರೀಮತಿ ಗಂಗೂಬಾಯಿ ಹಾನಗಲ್‌ರವರು ನಮ್ಮನ್ನಗಲಿದ್ದಾರೆ, ಅದು ಸಂಗೀತ ಲೋಕಕ್ಕೆ ತುಂಬಲಾರದ ಒಂದು ನಷ್ಟ. ಅವರು ಇವತ್ತು ಕೀರ್ತಿಪತಾಕೆಯನ್ನು

ಭಾರತಾದ್ಯಂತ, ಜಗತ್ತಿನಾದ್ಯಂತ ಪಸರಿಸುವಂತೆ ಮಾಡಿದ್ದಾರೆ. ಅವರ ಸಂಗೀತ ಯಾವಾಗಲೂ ಅಜರಾಮರವಾಗಿರಲಿ. ಇವತ್ತು ಮುಖ್ಯಮಂತ್ರಿಗಳೆ, ಸಂಗೀತ ವಿಶ್ವವಿದ್ಯಾನಿಲಯಕ್ಕೆ ಶ್ರೀಮತಿ ಗಂಗೂಬಾಯಿ ಹಾನಗಲ್‌ರವರ ಹೆಸರನ್ನು ಇಡುತ್ತೇವೆಂದು ಹೇಳಿದ್ದು ಮತ್ತು ಅವರ ಮನೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರವೇನು ಮುಂದಾಗಿದೆ, ಇದು ಸ್ವಾಗತಾರ್ಹವೆಂದು ಹೇಳುತ್ತೇನೆ. ಇವತ್ತು ಗಂಗೂಬಾಯಿ ಹಾನಗಲ್‌ರವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ನಾನು ಭಗವಂತನಲ್ಲಿ ಪ್ರಾರ್ಥಿಸಿ, ಈ ಸಂತಾಪ ಸೂಚನೆಯ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಅಧ್ಯಕ್ಷರು : ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಈ ಸಂದರ್ಭದಲ್ಲಿ ಒಂದು ನಿಮಿಷ ಮೌನವನ್ನಾಚರಿಸಿದರು)

ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು. ಮೃತರ ಗೌರವಾರ್ಥ ಇವತ್ತು ಒಂದು ದಿವಸದ ಮಟ್ಟಿಗೆ ಸದನವನ್ನು ನಡೆಸದೇ ಅವರಿಗೆ ಗೌರವವನ್ನು ನೀಡಲಾಗುವುದು, ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ದಿ:22-7-2009ರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮಧ್ಯಾಹ್ನ 12 ಗಂಟೆ 19 ನಿಮಿಷಕ್ಕೆ ಮುಂದೂಡಲಾಯಿತು)